For More Info Visit: Karnataka24.in

[illegible] ಗೆಜ್ಜೆ

ನೋಂದಣಿ ಸಂಖ್ಯೆ : ಡಿಆರ್/ಬಿಜಿಕೆ/ಆರ್‌ಎಸ್‌ಆರ್/ಆರ್‌ಜಿಎನ್/43302/2012-13 ದಿನಾಂಕ: 30-07-2012
Phone : +91-7975704491 Email: bagalkotvakuta@gmail.com

ಬಾಗಲಕೋಟ ಜಿಲ್ಲಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ /ಸಹಕಾರಿಗಳ ಸಹಕಾರ ಒಕ್ಕೂಟ ನಿ., ಬಾಗಲಕೋಟ

ಪ್ಲಾಟ್ ನಂ.58ಡಿ, ಸೆಕ್ಟರ್ ನಂ.25, ವೆಸ್ಟ್ ಕಾ ಮೆಂಬರಮೆಂಟ್ ಆಫೀಸ್ ಹತ್ತಿರ, ನವನಗರ, ಬಾಗಲಕೋಟೆ, 587103

ಕ್ರ.ಸಂ.: ಬಾ.ಜಿ.ಕೃ.ಪ.ಸ.ಸಂ./ಸ.ಸ.ಒ.ನಿ.ಬಾ./ಸಿ.ನೇ./2026-27 ದಿನಾಂಕ: 16-10-2026

ಸಿಬ್ಬಂದಿ ನೇಮಕಾತಿ ಅಧಿಸೂಚನೆ

ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರ ಇವರ ಆದೇಶ ಸಂಖ್ಯೆ: ಆರ್.ಸಿ.ಎಸ್/ಯುಬಿಸಿ-7/25/ಯುಸಿಎಸ್/2026-27 ದಿನಾಂಕ: 19-09-2026 ರನ್ವಯ ಅನುಮತಿ ಪಡೆದ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ

ಸಂ	ಹುದ್ದೆಗಳ ವಿವರ	ಒಟ್ಟು ಹುದ್ದೆ	ವಿದ್ಯಾರ್ಹತೆ	ವೇತನ ಶ್ರೇಣಿ
1	ದ್ವಿತೀಯ ದರ್ಜೆ ಸಹಾಯಕ ಕಮ್ ಮಾರಾಟಾಧಿಕಾರಿ	02	1. ದ್ವಿತೀಯ ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು. 2. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. ಮತ್ತು 3. ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಶನ್ ಜ್ಞಾನವಿರಬೇಕು.	23500-550-24600-600-27000-650-29600-750-32600-850-36000-950-39800-1100-46400-1250-47650
2	ಟೈಪಿಸ್ಟ್ ಕಮ್ ಅಕೌಂಟಂಟ್	02	1. ದ್ವಿತೀಯ ಪಿ.ಯು.ಸಿ. ಯಲ್ಲಿ ಅಥವಾ ಮೂರು ವರ್ಷದ ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಉತ್ತೀರ್ಣರಾಗಿರಬೇಕು. 2. ಕನ್ನಡ / ಇಂಗ್ಲಿಷ್ ಟೈಪ್‌ರೈಟಿಂಗ್‌ನಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕಂಪ್ಯೂಟರ್‌ನಲ್ಲಿ ಕನ್ನಡ / ಇಂಗ್ಲಿಷ್ ಟೈಪಿಂಗ್‌ನಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನವಿರಬೇಕು. ಮತ್ತು 3. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.	21400-500-22400-550-24600-600-27000-650-29600-750-32600-850-36000-950-39800-1100-42000
3	ಡ್ರೈವರ್ ಕಮ್ ಅಟೆಂಡರ್	01	1. ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿದ್ದು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. 2. ಕಾನೂನುಬದ್ಧ ಡ್ರೈವಿಂಗ್ ಲೈಸನ್ಸ್ ಹೊಂದಿರಬೇಕು.	17000-400-18600-450-20400-500-22400-550-24600-600-27000-650-28950

ಮೇಲ್ಕಾಣಿಸಿದ ವೇತನ ಶ್ರೇಣಿಗಳೊಂದಿಗೆ ಒಕ್ಕೂಟದಲ್ಲಿ ಕಾಲಕಾಲಕ್ಕೆ ಅನ್ವಯಿಸುವ ತುಟ್ಟಿಭತ್ಯೆ ಹಾಗೂ ಇತರ ಭತ್ಯೆಗಳನ್ನು ನೀಡಲಾಗುವುದು.

1. **ವಯೋಮಿತಿ:** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ನಿಯಮಾನುಸಾರ ಈ ಕೆಳಕಂಡ ಗರಿಷ್ಠ ವಯೋಮಿತಿಯೊಳಗಿರಬೇಕು.

1	ಯಾವುದೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಪ್ರವರ್ಗ-1	40 ವರ್ಷಗಳು
2	ಇತರೆ ಹಿಂದುಳಿದ ವರ್ಗಕ್ಕೆ ಸೇರಿದವರು (ಅಂದರೆ ಪ್ರವರ್ಗ-2ಎ, 2ಬಿ, 3ಎ ಹಾಗೂ 3ಬಿ)	38 ವರ್ಷಗಳು
3	ಸಾಮಾನ್ಯ ವರ್ಗ	35 ವರ್ಷಗಳು

ಸೂಚನೆ : ಘನ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ/262/ಸೇರನಿ/2025 ದಿನಾಂಕ 29.01.2026 ಪ್ರಕಾರ ಎಲ್ಲ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ 5 ವರ್ಷಗಳ ವಿನಾಯಿತಿಯನ್ನು ನೀಡಲಾಗಿದೆ.

2. **ಅರ್ಜಿ ಫಾರ್ಮ್:** ಒಕ್ಕೂಟದ ಕಛೇರಿ, ಪ್ಲಾಟ್ ನಂ. 58ಡಿ, ಸೆಕ್ಟರ್ ನಂ. 25, ನವನಗರ, ಬಾಗಲಕೋಟ 587103 ರಲ್ಲಿ ದಿನಾಂಕ: 19-10-2026 ರಿಂದ ರೂ. 100/- ಶುಲ್ಕ ಪಾವತಿಸಿ ಅರ್ಜಿಯನ್ನು ಒಕ್ಕೂಟದ ಕೆಲಸದ ದಿನದಂದು ಬೆಳಿಗ್ಗೆ 11:00 ರಿಂದ ಸಂಜೆ 05:00 ಗಂಟೆಯವರೆಗೆ ಪಡೆಯತಕ್ಕದ್ದು.

3. **ಅರ್ಜಿ ಶುಲ್ಕ:** ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 1,000/- ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಅಭ್ಯರ್ಥಿಗಳಿಗೆ ರೂ. 500/- ಇರುತ್ತದೆ. ಅರ್ಜಿ ಶುಲ್ಕದ ಮೊತ್ತವನ್ನು ಡಿಮಾಂಡ್ ಡ್ರಾಫ್ಟ್ / ಬ್ಯಾಂಕರ್ಸ್ ಚೆಕ್ ಅನ್ನು "ಬಾಗಲಕೋಟ ಜಿಲ್ಲಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ / ಸಹಕಾರಿಗಳ ಸಹಕಾರ ಒಕ್ಕೂಟ ನಿ., ಬಾಗಲಕೋಟ" ಈ ಹೆಸರಿನಲ್ಲಿ ತೆಗೆಯತಕ್ಕದ್ದು ಅಥವಾ ಒಕ್ಕೂಟದ ಕಛೇರಿಗೆ ಭೇಟಿ ನೀಡಿ ಶುಲ್ಕ ಪಾವತಿಸಿ ರಶೀದಿ ಪಡೆದುಕೊಳ್ಳತಕ್ಕದ್ದು. ಶುಲ್ಕವನ್ನು ಯಾವುದೇ ಕಾರಣಕ್ಕೂ ಮರಳಿಸಲಾಗುವುದಿಲ್ಲ.

4. **ಅರ್ಜಿ ಸಲ್ಲಿಸುವ ವಿಧಾನ:**
   4.1. ಒಕ್ಕೂಟದಿಂದ ಪೂರೈಸಿದ ಮೂಲ ಅರ್ಜಿಯನ್ನು ಸ್ವ-ಹಸ್ತಾಕ್ಷರದಲ್ಲಿ ಭರ್ತಿ ಮಾಡಿ, ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಿ, ಹೆಚ್ಚುವರಿ ಎರಡು (2) ಭಾವಚಿತ್ರಗಳನ್ನು ಸಲ್ಲಿಸತಕ್ಕದ್ದು.
   4.2. ವಯಸ್ಸು ದೃಢೀಕರಣ ಕುರಿತು ಎಸ್.ಎಸ್.ಎಲ್.ಸಿ / 10 ನೇ ತರಗತಿ ಅಂಕಪಟ್ಟಿ ಪ್ರಮಾಣ ಪತ್ರ ಅಥವಾ ವರ್ಗಾವಣೆ ಪ್ರಮಾಣ ಪತ್ರ (TC) ದಾಖಲಾತಿಯನ್ನು ಸಲ್ಲಿಸತಕ್ಕದ್ದು ಹಾಗೂ ಹುದ್ದೆವಾರು ನಿಗದಿಪಡಿಸಿದ ವಿದ್ಯಾರ್ಹತೆಯ ಪ್ರಮಾಣಪತ್ರ ಮತ್ತು ಅಂಕಪಟ್ಟಿಯ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಅರ್ಜಿಯ ಜೊತೆಗೆ ಸಲ್ಲಿಸತಕ್ಕದ್ದು.
   4.3. ಅರ್ಜಿ ಶುಲ್ಕ ವಿನಾಯಿತಿ ಪಡೆಯಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಪ್ರವರ್ಗ-1 ವರ್ಗಗಳ ಅರ್ಜಿದಾರರು ಅವಧಿಯೊಳಗಿನ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು.

5. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಸರಿಯಾಗಿ ಭರ್ತಿ ಮಾಡಿದ / ಪೂರ್ಣಗೊಳಿಸಿದ ಅರ್ಜಿಗಳನ್ನು ಎಲ್ಲಾ ದಾಖಲಾತಿಗಳೊಂದಿಗೆ ದಿನಾಂಕ: 12-11-2026 ಸಂಜೆ 05.00 ಗಂಟೆಯ ಒಳಗಾಗಿ "ನೇಮಕಾತಿ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಬಾಗಲಕೋಟ ಜಿಲ್ಲಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ / ಸಹಕಾರಿಗಳ ಸಹಕಾರ ಒಕ್ಕೂಟ ನಿ., ಬಾಗಲಕೋಟ", ಪ್ಲಾಟ್ ನಂ. 58ಡಿ, ಸೆಕ್ಟರ್ ನಂ. 25, ನವನಗರ, ಬಾಗಲಕೋಟ 587103 ಇಲ್ಲಿಗೆ ಸಲ್ಲಿಸಬೇಕು.

6. **ಇತರ ಸೂಚನೆಗಳು ಮತ್ತು ಷರತ್ತುಗಳು:**
   1. "ದ್ವಿತೀಯ ದರ್ಜೆ ಸಹಾಯಕ ಕಮ್ ಮಾರಾಟಾಧಿಕಾರಿ" ಹಾಗೂ "ಟೈಪಿಸ್ಟ್ ಕಮ್ ಅಕೌಂಟಂಟ್" ಮತ್ತು "ಡ್ರೈವರ್ ಕಮ್ ಅಟೆಂಡರ್" ಹುದ್ದೆಗಳ ನೇಮಕಾತಿಗಾಗಿ ಲಿಖಿತ ಪರೀಕ್ಷೆಯನ್ನು ಜರುಗಿಸಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಶೇಕಡಾವಾರು ಆಧಾರದ ಮೇಲೆ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.
   2. ನೇಮಕಾತಿ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳನ್ನು ಮಾತ್ರ ಲಿಖಿತ ಪರೀಕ್ಷೆ ಅಥವಾ ಸಂದರ್ಶನಕ್ಕೆ ಕರೆಯಲಾಗುವುದು.
   3. 200 ಅಂಕಗಳ ಲಿಖಿತ ಪರೀಕ್ಷೆಯಿದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲಿಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಗಳಿಗಾಗಿ 50 ಅಂಕಗಳು, ಭಾರತದ ಸಂವಿಧಾನಕ್ಕಾಗಿ 25 ಅಂಕಗಳು ಹಾಗೂ ಬ್ಯಾಂಕಿನ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯ ವಸ್ತುಗಳಿಗೆ 25 ಅಂಕಗಳು ಒಳಗೊಂಡಿರುತ್ತದೆ.
   4. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಲಿಖಿತ ಪರೀಕ್ಷೆ / ಸಂದರ್ಶನಕ್ಕೆ ಹಾಜರಾಗತಕ್ಕದ್ದು.
   5. ಅಪೂರ್ಣ, ಸ್ಪಷ್ಟವಾಗಿ ಬರೆಯದ, ಸಹಿ ಮಾಡದೇ ಇರುವ, ಶುಲ್ಕವನ್ನು ಪಾವತಿಸದ, ಅವಶ್ಯಕ ದೃಢೀಕೃತ ದಾಖಲಾತಿಗಳನ್ನು ಲಗತ್ತಿಸದ ಹಾಗೂ ಎಲ್ಲಾ ದಾಖಲಾತಿಗಳನ್ನು ದೃಢೀಕರಿಸದೇ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಅವಧಿಯ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
   6. ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಕಾರಣವನ್ನು ನೀಡದೆ ಮುಂದೂಡುವ, ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.
   7. ಅರ್ಹತೆ ಹೊಂದಲು ವಿಫಲವಾದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗೆ / ಸಂದರ್ಶನಕ್ಕೆ ಕರೆ ಅಥವಾ ಸೂಚನೆ ನೀಡಲಾಗುವುದಿಲ್ಲ. ಅನರ್ಹತೆ ಹೊಂದಿದ ಅಭ್ಯರ್ಥಿಗಳ ಜೊತೆ ಈ ಕುರಿತು ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
   8. ವಿವಾಹಿತ ಮಹಿಳಾ ಅರ್ಜಿದಾರರು ಶೈಕ್ಷಣಿಕ ಅರ್ಹತಾ ಪ್ರಮಾಣಪತ್ರಗಳ ಪ್ರಕಾರ ಅರ್ಜಿಯಲ್ಲಿ ತಮ್ಮ ವಿವರಗಳನ್ನು (ಪೂರ್ಣ ಹೆಸರು, ವಿಳಾಸ, ಇತ್ಯಾದಿ) ಭರ್ತಿ ಮಾಡಬೇಕು ಮತ್ತು ವಿವಾಹ ಪ್ರಮಾಣಪತ್ರವನ್ನು ಸಹ ಲಗತ್ತಿಸಬೇಕು.
   9. ಹೆಚ್ಚಿನ ಮಾಹಿತಿಗೆ ಒಕ್ಕೂಟದ ಮುಖ್ಯ ಕಛೇರಿಗೆ ಸಂಪರ್ಕಿಸತಕ್ಕದ್ದು.

ಸಹಿ/-
ನೇಮಕಾತಿ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಬಾಗಲಕೋಟ ಜಿಲ್ಲಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ /
ಸಹಕಾರಿಗಳ ಸಹಕಾರ ಒಕ್ಕೂಟ ನಿ., ಬಾಗಲಕೋಟ

ಸ್ಥಳ : ಬಾಗಲಕೋಟೆ
ದಿನಾಂಕ : 19-10-2026